ಸ್ಫೋಟಕಗಳ ತನಿಖೆಯ ಪ್ರಗತಿ

117(226) ಶ್ರೀ ಸುನೀಲ್ ಕುಮಾರ್.ವಿ :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಇತ್ತೀಚೆಗೆ ಕಾರ್ಕಳ ಪರಿಸರದಲ್ಲಿ ಅಕ್ರಮ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಪ್ರಕರಣದ ತನಿಖೆಯ ಪ್ರಗತಿ ಯಾವ ಹಂತದಲ್ಲಿದೆ ;

(ಆ) ಈ ಪ್ರಕರಣದಡಿ ಯಾರು ಯಾರನ್ನು ಬಂದಿಸಲಾಗಿದೆ; ಯಾವ ಅಧಿನಿಯಮದಡಿ ದೂರು ದಾಖಲಿಸಿದೆ ;

(ಇ) ಈ ಸ್ಫೋಟಕಗಳ ಮೂಲ ಯಾವುದು ;

(ಈ) ಈ ಪ್ರಕರಣದಲ್ಲಿ ಎಷ್ಟು ಮಂದಿ ಭಾಗಿಯಾಗಿದ್ದಾರೆ ? (ಹೆಸರು ಸಹಿತ ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):–

(ಅ) ಇತ್ತೀಚೆಗೆ ಕಾರ್ಕಳ ಪರಿಸರದಲ್ಲಿ ಅಕ್ರಮ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ 1, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 3 ಹಾಗೂ ಹೆಬ್ರಿ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಗಳ ತನಿಖೆ ಪೂರ್ಣಗೊಂಡಿದ್ದು, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲು ಬಾಕಿ ಇದೆ.

(ಆ) ಇದಕ್ಕೆ ಸಂಬಂಧಿಸಿದಂತೆ ಕಾರ್ಕಳ ನಗರ ಪೊಲೀಸ್ ಠಾಣೆ ಅ.ಕ್ರ. 85/ 2014 ಕಲಂ 9 B(1)(b) Explosive Act 1884, 5 of Explosive Substances Act 1908, 113 of The explosive Rules 1983 & 11 of Ammonium Nitrate Rule 2012, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಅ.ಕ್ರ. 43/2014, ಕಲಂ: 9B(1)(b) Explosive Act 1884, 5 of Explosive Substances Act 1908, 113 of The explosive Rules 1983 & 11 of Ammonium Nitrate Rule 2012, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ

ಅ.ಕ್ರ. 44/2014, ಕಲಂ: 9B(1)(b) Explosive Act 1884, 5 of Explosive Substances Act 1908, 113 of The explosive Rules 1983 & 11 of Ammonium Nitrate Rule 2012, ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಅ.ಕ್ರ. 47/2014, ಕಲಂ: 9B(1)(b) Explosive Act 1884, 113 of The Explosive Rules 1983 & ಹೆಬ್ರಿ ಪೊಲೀಸ್ ಠಾಣಾ ಅ.ಕ್ರ. 33/2014, ಕಲಂ: 9B(1)(b) Explosive Act 1884, 11 of Ammonium Nitrate Rules 2012 ರಂತೆ ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಟಿ.ಕೆ. ಬಿಜು ಎಂಬಾತನನ್ನು ಬಂಧಿಸಲಾಗಿರುತ್ತದೆ.

(ಇ) ಜನವರಿ 2014 ನಂತರ ಅಮೋನಿಯಮ್ ನೈಟ್ರೇಟ್ ಶೇಖರಣೆಯನ್ನು ನಿರ್ಬಂಧಿಸಲಾಗಿದ್ದು, ಅದಕ್ಕೂ ಮುಂಚಿತವಾಗಿಯೇ ಲೈಸನ್ಸ್‌ದಾರರಿಂದ ಅದನ್ನು ಖರೀದಿಸಿ ಸಂಗ್ರಹಿಸಿಟ್ಟಿರುವುದು ತನಿಖೆಯ ವೇಳೆ ತಿಳಿದುಬಂದಿರುತ್ತದೆ.

(ಈ) ಈ ಪ್ರಕರಣದಲ್ಲಿ ಟಿ.ಕೆ. ಬಿಜು (44), ತಂದೆ: ಕುರುವಿಲ, ವಾಸ: ತುರ್ತಿಕೆರೆ ಫಾರ್ಮ್, ಅಜೆಕಾರು ಅಂಚೆ, ಮರ್ಣೆ ಗ್ರಾಮ, ಕಾರ್ಕಳ ತಾಲ್ಲೂಕು ಎಂಬಾತ ಭಾಗಿಯಾಗಿರುತ್ತಾನೆ.

ರೌಡಿ ಲಿಸ್ಟ್ ದಾಖಲೆ

118(227) **ಶ್ರೀ ಸುನೀಲ್ ಕುಮಾರ್.ವಿ (ಕಾರ್ಕಳ) :–** ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೆ:–

(ಅ) 2013ನೇ ಮೇ ವರೆಗಿನ ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ತೆರೆದಿರುವ ರೌಡಿ ಪಟ್ಟಿಯಲ್ಲಿನ ಎಲ್ಲಾ ರೌಡಿ ಆಸಾಮಿಗಳ ಹೆಸರು ಮತ್ತು ವಿಳಾಸಗಳ ವಿವರ ;

(ಆ) ಹಾಗಿದ್ದಲ್ಲಿ, ಅವರ ಮೇಲೆ ಇರುವ ವಿವಿಧ ಪ್ರಕರಣಗಳು ಯಾವುವು ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):–

(ಅ) ಮೇ ತಿಂಗಳಿನಿಂದ ಇಲ್ಲಿಯ ತನಕ ಮಂಗಳೂರು ನಗರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಒಟ್ಟು ರೌಡಿ ಹಾಳೆ ಹೊಂದಿರುವವರ ಸಂಖ್ಯೆ ಈ ಕೆಳಕಂಡಂತೆ ಇದೆ.